## ಇಲ್ಲಿಯವರೆಗೆ



ತಮ್ಮ ಸ್ಟಾಲ್‌ಗೆ ಬಂದ ಗ್ರಾಹಕರಿಗೆ ಭಾವೇಶ್ ಮೋಂಬತ್ತಿಗಳನ್ನಷ್ಟೇ ಮಾರುತ್ತಿರಲಿಲ್ಲ; ವ್ಯಾಪಾರದ ಜೊತೆಗೆ ಸ್ನೇಹದ ನಡವಳಿಕೆಯನ್ನೂ ತೋರುತ್ತಿದ್ದರು. ಈ ಸ್ನೇಹ ಸಂಬಂಧಗಳು ಭಾವೇಶ್ ಅವರ ಕೈಗಾಡಿಯ ವ್ಯಾಪಾರಕ್ಕೆ ಹೊಸ ತಿರುವು ನೀಡಿದವು. ಗ್ರಾಹಕರ ಧ್ವನಿಯಿಂದಲೇ ಅವರ ಮನಸ್ಸುಗಳನ್ನು ಅರಿತುಕೊಂಡು, ವ್ಯಾಪಾರ ಕುದುರಿಸುವ ಜಾಣ್ಮೆ ಅವರಿಗಿತ್ತು. ಉಡುಗೊರೆ ನೀಡುವ ಮೂಲಕ ಗ್ರಾಹಕರ ಜೊತೆಗೆ ದೀರ್ಘಕಾಲೀನ ಬಾಂಧವ್ಯ ಸಂಪಾದಿಸತೊಡಗಿದರು. ವ್ಯಾಪಾರದೊಂದಿಗಿನ ಮಮತೆಯ ನಡವಳಿಕೆಯೇ ಭಾವೇಶ್ ಅವರ ಮೋಂಬತ್ತಿಗಳನ್ನು ಕಾರ್ಪೊರೇಟ್ ಕಂಪನಿಗಳ ಉದ್ಯೋಗಿಗಳ ಸಖ್ಯ ದೊರೆಯಲು ಕಾರಣವಾಯಿತು.

ಭಾವೇಶ್ ವಿಚಾರಿಸಿದರು.

'ಹೌದು, ಕೇಳಿದ್ದೇನೆ. ಶಾಲೆಯಲ್ಲಿ ಒಮ್ಮೆ ನಾವು ವರ್ಲಿ ಸೀಫೇಸ್‌ನಲ್ಲಿರುವ ಎನ್.ಎ.ಬಿ. ಇಂಡಿಯಾದ ಬ್ರೈಲ್ ಮುದ್ರಣಾಲಯಕ್ಕೆ ಹೋಗಿದ್ದೆವು' ಆಕೆ ಉತ್ತರಿಸಿದಳು.

'ಹೌದು ಮೇಡಂ. ಅದೇ ಬ್ರೈಲ್ ಲಿಪಿಯ ಸಹಾಯದಿಂದ ನಾನು ಬಣ್ಣಗಳನ್ನು ಗುರುತಿಸುತ್ತೇನೆ', ಅಷ್ಟೇ ಸಹಜವಾಗಿ ಭಾವೇಶ್ ಉತ್ತರಿಸಿದರು.

ಈಗ ಆ ಯುವತಿಯ ಬಳಿ ಇನ್ನೇನೂ ಪ್ರಶ್ನೆಗಳು ಉಳಿದಿರಲಿಲ್ಲ. ತಾನು ಕೊಂಡ ಮೋಂಬತ್ತಿಗಳ ಬೆಲೆ ಕೊಟ್ಟು ಹೊರಟು ಹೋದಳು.

ಮರುದಿನ ಸಂಜೆ, ಮಹಾಬಲೇಶ್ವರದ ಮಾರುಕಟ್ಟೆಯಲ್ಲಿ ಅದೇ ಚಿಕ್ಕ ಜಾಗದಲ್ಲಿ ತಮ್ಮ ತಳ್ಳು ಗಾಡಿಯ ಸ್ಟಾಲ್ ಹಾಕಲು ತಲುಪಿದಾಗ, ಅವರ ನಿತ್ಯದ ಜಾಗದಿಂದ ಆರೆಂಟು ಜನರು ಮಾತನಾಡುತ್ತಿರುವ ದನಿ ಕೇಳಿಸಿತು. ಕೈಗಾಡಿಯನ್ನು ನೂಕುತ್ತಾ ಅಲ್ಲಿಗೆ ತಲುಪಿದ್ದ ಭಾವೇಶ್ ಮತ್ತು ಇರ್ಫಾನ್ ಆ ಜಾಗದಲ್ಲಿ ನಿಂತು ಮಾತನಾಡುತ್ತಿದ್ದ ಆ ಜನರಿಗೆ ಪಕ್ಕಕ್ಕೆ ನಿಲ್ಲುವಂತೆ ವಿನಂತಿಸಿಕೊಂಡರು. ಇನ್ನುಳಿದ ಬೀದಿ ಬದಿಯ ವ್ಯಾಪಾರಿಗಳ ಸ್ಥಳಗಳೆಲ್ಲ ನಿರ್ಧಾರಿತವಾದ ಕಾರಣ, ಭಾವೇಶ್ ಅವರು ತಮ್ಮ ನಿಗದಿತ ಜಾಗದಲ್ಲಿ ಕೈಗಾಡಿ ನಿಲ್ಲಿಸಬೇಕಿತ್ತು. ಅವರು ಪಕ್ಕಕ್ಕೆ ಸರಿದೊಡನೆ, ಭಾವೇಶ್ ತಮ್ಮ ಸ್ಟಾಲ್ ಹಾಕಿದರು. ಈಗ ಆ ಜನರ ನಡುವಿನಿಂದ ಓರ್ವ ಯುವತಿಯ ದನಿ ಕೇಳಿಸಿತು. ಅದು ನಿನ್ನೆಯಷ್ಟೇ ಅವರು ಕೇಳಿದ್ದ ದನಿ ಅನಿಸತೊಡಗಿತ್ತು.

ಕೆಲವೇ ಕ್ಷಣದಲ್ಲಿ ಅವರಿಗೆ ಖಾತ್ರಿಯಾಯಿತು, ಈ ದನಿ ನಿನ್ನೆ ತಮ್ಮ ಅಂಗಡಿಗೆ ಬಂದ ಆ ಯುವತಿಯದೇ ಆಗಿದೆ. ಭಾವೇಶ್ ಆದರದಿಂದ 'ಗುಡ್ ಮಾರ್ನಿಂಗ್ ಮೇಡಂ' ಎಂದು ಹೇಳಿದರು.

'ಒಳ್ಳೆಯದಾಯಿತು ನೀನು ಈಗ ಬಂದದ್ದು. ನಾವು ಬಹಳಷ್ಟು ಹೊತ್ತಿನಿಂದ ನಿನ್ನ ನಿರೀಕ್ಷೆಯಲ್ಲಿ ನಿಂತಿದ್ದೆವು. ನನ್ನೊಡನೆ ನನ್ನ ಸಂಬಂಧಿಕರೂ ಬಂದಿದ್ದಾರೆ. ಅವರೆಲ್ಲರೂ ನಿಮ್ಮಿಂದ ಮೋಂಬತ್ತಿ ಕೊಳ್ಳಲು ಇಚ್ಛಿಸಿದ್ದಾರೆ' ಎಂದು ಆ ಯುವತಿ ಹೇಳಿದಳು. ಭಾವೇಶ್ ತಮ್ಮ ಮೋಂಬತ್ತಿಗಳ ಬಗ್ಗೆ ಹೇಳುವ ಮೊದಲೇ ಆ ಯುವತಿ ಮೋಂಬತ್ತಿಗಳ ಗುಣ ವಿಶೇಷವನ್ನು ವಿವರಿಸಲು ತೊಡಗಿದ್ದಳು.

ಅರೆಕ್ಷಣ ಭಾವೇಶ್ ಅವರಿಗೆ ಅನಿಸಿತು, ಆಕೆಗೆ ತಮ್ಮ ಮೋಂಬತ್ತಿಗಳ ಬಗ್ಗೆ ತಮಗಿಂತ ಹೆಚ್ಚು ತಿಳಿದಿದೆ!

ಸುಮಾರು ಎರಡು ಮೂರು ಸಾವಿರಗಳ ಮೋಂಬತ್ತಿ ಕೊಂಡು ಪ್ರಶಂಸೆಯ ಮಾತುಗಳನ್ನು ಹೇಳುತ್ತಾ ಅವರುಗಳೆಲ್ಲ ವಿದಾಯ ಹೇಳಿದರು. ಭಾವೇಶ್ ಅವರಿಗೆ ತುಂಬಾ ಖುಷಿಯಾಯಿತು. ಕಾರಣ ಎರಡು ಮೂರು ಬಾರಿ ಮಾತ್ರ ಒಂದೇ ದಿನದಲ್ಲಿ ಇಷ್ಟೊಂದು ಕ್ಯಾಂಡಲ್ಸ್ ಮಾರಾಟವಾಗಿದ್ದು. ಆ ಎಲ್ಲರಿಗೂ ಮತ್ತೊಮ್ಮೆ ಭಾವೇಶ್ ಧನ್ಯವಾದ ಹೇಳಿದರು. ಆ ಸಮಯದಲ್ಲಿಯೇ ಆ ಯುವತಿ ಮತ್ತೊಂದು ಪ್ರಶ್ನೆ ಕೇಳಿದಳು 'ನೀವು ಒಬ್ಬ ಸಹಾಯಕರನ್ನು ಇಟ್ಟುಕೊಳ್ಳಬಹುದಲ್ಲ? ಯಾರಾದರೂ ಜೊತೆಗೆ ಇದ್ದರೆ, ಮಾರಾಟಕ್ಕೆ ಅನುಕೂಲವಾಗುತ್ತದೆ'.

ಇಷ್ಟರಲ್ಲಿ ಎದುರಿಗಿದ್ದ ಆ ಎಲ್ಲ ಜನರ ಮಾತುಕತೆಯ ನಡುವೆ ಭಾವೇಶ್ ಅವರಿಗೆ ಈ ಹುಡುಗಿಯ ಹೆಸರು ನೀತಾ ಎಂದು ಗೊತ್ತಾಗಿತ್ತು. ಭಾವೇಶ್ ಅವರ ಕಿವಿಗಳು ಚುರುಕು ಮಾತ್ರವಲ್ಲ, ಅವರ ಗಮನ ಅಷ್ಟು ತೀಕ್ಷ್ಣವಾಗಿ ಕೆಲಸ ಮಾಡುತ್ತದೆ. ಕಣ್ಣಿರುವ ನಾವು ಶ್ರವಣೇಂದ್ರಿಯಗಳತ್ತ ಹೆಚ್ಚು ಗಮನವನ್ನೇ ಕೊಡುವುದಿಲ್ಲ. ಬಹಳಷ್ಟು ಬಾರಿ ನಾವು ಕೇಳುತ್ತೇವೆ, ಆದರೆ ಆಲಿಸಿರುವುದಿಲ್ಲ. ಆದರೆ ಭಾವೇಶ್ ಅವರಿಗೆ ಕಿವಿಗಳೇ ಕಣ್ಣುಗಳಾದ ಕಾರಣ, ಕಿವಿಯಿಂದ ಬಹಳಷ್ಟು ಮಾಹಿತಿಯನ್ನು ಸಂಗ್ರಹಿಸುವುದು ಮಾತ್ರವಲ್ಲ, ಆ ಸಂಗ್ರಹಿಸಿದ ಮಾಹಿತಿಯನ್ನು ಅವರ ಮೆದುಳು ಅತಿ ವೇಗವಾಗಿ ಸಂಸ್ಕರಿಸಿ ಉತ್ತರಗಳನ್ನು ನೀಡುತ್ತಿತ್ತು.

ಹಾಗೆಂದೇ, ಭಾವೇಶ್ ಅವರನ್ನು ಉದ್ದೇಶಿಸಿ 'ನೀತಾ ಮೇಡಂ, ನೀವು ಸರಿಯಾದ ಮಾತು ಹೇಳುತ್ತಿದ್ದೀರಿ. ಆದರೆ ನಾನು ಮೋಂಬತ್ತಿಗಳನ್ನು ಮಾರಿ ಬಹಳ ಕಷ್ಟದಿಂದ ನನ್ನ ಮತ್ತು ನನ್ನ ತಂದೆಯವರ ಜೀವನವನ್ನು ನಡೆಸುತ್ತಿದ್ದೇನೆ. ಸಹಾಯಕನಿಗೆ ಎಲ್ಲಿಂದ ಸಂಬಳ ಕೊಡಲಿ' ಎಂದು ಹೇಳಿದರು.

ಆಕೆ ಕ್ಷಣ ತಡೆದು, 'ನಾವು ಇನ್ನೂ 20 ದಿನಗಳು ಇಲ್ಲಿ ಮಹಾಬಲೇಶ್ವರದಲ್ಲಿ ಇರುತ್ತೇವೆ. ಒಂದು ದೊಡ್ಡ ಬಂಗಲೆಯನ್ನು ಬಾಡಿಗೆಗೆ ತೆಗೆದುಕೊಂಡಿದ್ದೇವೆ. ಬಹಳ ವರ್ಷಗಳಿಂದ ನಾವು ಪ್ರತಿ ವರ್ಷ ಇಡೀ ಕುಟುಂಬ ಬೇಸಿಗೆಯಲ್ಲಿ ಮಹಾಬಲೇಶ್ವರಕ್ಕೆ ಬರುತ್ತೇವೆ. ಸುಮ್ಮನೆ ಎಲ್ಲೆಲ್ಲೋ ಅಲೆದಾಡುವ ಬದಲು, ಒಂದೆಡೆ ಹೀಗೆ ಬಂಗಲೆಯಲ್ಲಿ ಪರಿವಾರದ ಎಲ್ಲ ಸದಸ್ಯರು ಜೊತೆಯಾಗಿ ಸಮಯ ಕಳೆಯಲು ಬಯಸುತ್ತೇವೆ' ಎಂದು ಹೇಳಿದ ಆಕೆ, ಏನೋ ನೆನಪಿಸಿಕೊಂಡು, 'ಅಂದಹಾಗೆ, ನಾನು ನಿಮ್ಮ ಹೆಸರನ್ನು ಕೇಳುವುದು ಮರೆತೆ' ಎಂದರು.

'ಜೀ, ನನ್ನ ಹೆಸರು ಭಾವೇಶ್ ಭಾಟಿಯಾ' ತಕ್ಷಣ ಉತ್ತರಿಸಿದರು.

'ಹಾಂ, ಮಿಸ್ಟರ್ ಭಾವೇಶ್, ನಿಮಗೆ ಅಭ್ಯಂತರ ಇಲ್ಲವೆಂದರೆ, ನಾನು ಸಂಜೆ ಹೊತ್ತಿನಲ್ಲಿ ಇಲ್ಲಿ ಬಂದು ನಿಮಗೆ ಸಹಾಯ ಮಾಡಬಲ್ಲೆ. ಹೆದರಬೇಡಿ, ನನಗೆ ಯಾವ ಸಂಬಳವೂ ಬೇಕಿಲ್ಲ. ನಿಮಗೆ ಸಹಾಯ ಮಾಡಿದ ಖುಷಿ ನನಗೆ ಸಿಗುತ್ತದೆ' ಎಂದರು.

ನೀತಾ ಆ ಕ್ಷಣವೇ ತನ್ನ ಅಮ್ಮನಿಂದ ಈ ಕೆಲಸಕ್ಕೆ ಅನುಮತಿ ಪಡೆಯಲು ಇಚ್ಛಿಸಿದಳು. ಭಾವೇಶ್ ಅವರಿಗೆ ಅನಿಸಿತು, ಆಕೆಗೆ ಮೌನ ಸ್ವೀಕೃತಿ ಸಿಕ್ಕಿದೆ. ಕಾರಣ ಅವರುಗಳು ಹೋಗುತ್ತಿದ್ದಂತೆ, ಭಾವೇಶ್ ಅವರ ಕಿವಿಗೆ ಬಿತ್ತು – 'ಸರಿ ಹಾಗಾದರೆ. ಮಿಸ್ಟರ್ ಭಾಟಿಯಾ, ನಾಳೆ ಸಿಗೋಣ'. ಓರ್ವ ಅಂಧ ವ್ಯಕ್ತಿಗೆ ಸಹಾಯ ಮಾಡುವ ಸಂತೋಷ ಮತ್ತು ನಿಸ್ವಾರ್ಥ ಸಹಾನುಭೂತಿಯನ್ನು ಆಕೆಯ ಆ ಶಬ್ದಗಳಲ್ಲಿ ಭಾವೇಶ್ ಅರಿತರು.

ಮರುದಿನ ಭಾವೇಶ್ ಬಜಾರ್ ತಲುಪಿದಾಗ, ತಮ್ಮ ನಿಗದಿತ ಜಾಗಕ್ಕೆ ಬರುತ್ತಿರುವಂತೆ 1520 ಅಡಿಗಳ ದೂರದಲ್ಲಿಯೇ ಅವರಿಗೆ ಈಗ ಎರಡು ದಿನಗಳಲ್ಲಿ ಚಿರಪರಿಚಿತವಾದ ಸುಗಂಧದ ಪರಿಮಳ ಅವರನ್ನು ಎಚ್ಚರಿಸಿತು. ಭಾವೇಶ್ ಅವರು ಮೂಗಿನಿಂದಲೂ ಕಾಣಬಲ್ಲವರಾಗಿದ್ದರು!

ಕಳೆದ ಎರಡು ದಿನಗಳಿಂದ ಅವರು ಇದೇ ಪರಿಮಳವನ್ನು ತಮ್ಮ ಅಂಗಡಿಯಲ್ಲಿ ಆಘ್ರಾಣಿಸಿದ್ದರು. ಅವರು ಮತ್ತೇನೋ ಯೋಚಿಸುವ ಮೊದಲೇ, ಆ ಸಿಹಿಯಾದ ಸ್ವರ ಅವರ ಧ್ಯಾನವನ್ನು ತನ್ನತ್ತ ಸೆಳೆಯಿತು. 'ಹಲೋ ಮಿಸ್ಟರ್ ಭಾಟಿಯಾ, ಇಲ್ಲಿ ಕೊಡಿ. ನಾನು ನಿಮ್ಮ ಕೈಗಾಡಿ ತಳ್ಳುವುದಕ್ಕೆ ಸಹಾಯ ಮಾಡುತ್ತೇನೆ.'

ಭಾವೇಶ್ ಮತ್ತು ಇರ್ಫಾನ್ ಅವರಿಗೆ ಏನಾಗುತ್ತಿದೆ ಎಂದು ಅರ್ಥವಾಗುವ ಮೊದಲೇ, ನೀತಾ ಅವರಿಂದ ಅನುಮತಿ ಪಡೆದಿದ್ದರು. ಬೇರೆ ಬೇರೆ ಪೆಟ್ಟಿಗೆಗಳಲ್ಲಿ ತುಂಬಿದ್ದ ಬಗೆ ಬಗೆಯ ಮೋಂಬತ್ತಿಗಳನ್ನು ಹೊರಗೆ ತೆಗೆದು ಗಾಡಿಯ ಮೇಲೆ ಅಲಂಕರಿಸಿ ಇಡಲು ಹೊರಟರು.

ಆ ಸಂಜೆ ಬಂದ ನೀತಾ ರಾತ್ರಿ 8 ಗಂಟೆಯವರೆಗೂ ಅವರೊಡನೆ ಇದ್ದರು. ಆಕೆಯ ಇರುವು ಭಾವೇಶ್ ಅವರಿಗೆ ನಿಜಕ್ಕೂ ಸಹಾಯಕವಾಗಿತ್ತು. ಅದು ಬಹುಶಃ ಶನಿವಾರದ ದಿನ. ಹಾಗಾಗಿ ಪ್ರವಾಸಿಗರೂ ತುಂಬಾ ಜನ ಇದ್ದರು. ನೀತಾ ಅವರ ಸಹಾಯದಿಂದ, ಆ ದಿನ ಬಹಳಷ್ಟು ವ್ಯಾಪಾರವಾಯಿತು. ಆ ಹೊತ್ತಿಗೆ ಆಕೆಯ ಕುಟುಂಬದ ಸದಸ್ಯರು ಮಾರುಕಟ್ಟೆಗೆ ಅಡ್ಡಾಡಲು ಬಂದರು. ಅವರೊಡನೆ, ನೀತಾ ತಾವು